ವಾರ್ಷಿಕವಾರು ಮತ್ತು ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವರ್ಷ	ತಾಲ್ಲೂಕು	ಘಟಕ	ಫಲಾನುಭವಿಗಳ ಸಂಖ್ಯೆ	ನೀರಾವರಿಗೆ ಒಳಪಟ್ಟ	ವೆಚ್ಚ ಮಾಡಿದ ಹಣ
						(ರೂ. ಲಕ್ಷಗಳಲ್ಲಿ)
1.	1996-97	ರಾಯಚೂರು	1	02	9.32	0.46
2.	1996-97	ದೇವದುರ್ಗ	13	41	154.13	8.21
		ಒಟ್ಟು	**14**	**43**	**163.45**	**8.67**

ವಿಷಯ : ಉ. ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ತೊಂದರೆ.

1479(1999)-ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಉತ್ತರ ಕನ್ನಡ ಯಲ್ಲಾಪುರ ಮತ್ತು ಅಂಕೋಲಾ ಪಟ್ಟಣಕ್ಕೆ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಸ್ಥಳಗಳೆಷ್ಟು?

ಆ. ಕುಡಿಯುವ ನೀರಿನ ತೊಂದರೆ ನಿವಾರಣೆ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ? ಇದಕ್ಕಾಗಿ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಯಲ್ಲಾಪುರದಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಸ್ಥಳಗಳು : ಜಡ್ಡಿ ಪ್ರದೇಶ, ಕಾಳಮ್ಮನಗರ, ಶಾರದಾಗಲ್ಲಿ ಸ್ವಾಗತ ಹೋಟೆಲ್ ಏರಿಯಾ, ಇಸ್ಲಾಂ ಮೊಹಲ್ಲಾ, ಉದ್ಯಮನಗರ, ಆಶ್ರಯ ಕಾಲೋನಿ ಮತ್ತು ವೆಲಿಷ್‌ಗಲ್ಲಿ.

(ಅಂಕೋಲಾದಲ್ಲಿ ಸಾಧಾರಣವಾಗಿ ನೀರಿನ ಸಮಸ್ಯೆ ಇದೆ.)

ಆ) 1. ಯಲ್ಲಾಪುರ ಪಟ್ಟಣಕ್ಕೆ ಜಿಲ್ಲಾ ಪರಿಷತ್ ರೂ. 580.50 ಲಕ್ಷಗಳಿಗೆ, ಗಂಗಾವಳಿ ನದಿಯನ್ನು ಮೂಲವಾಗಿಟ್ಟು ಕೊಂಡು ಅಂದಾಜನ್ನು ತಯಾರಿಸಿದೆ. ಈ ಅಂದಾಜನ್ನು ಪ್ರಸಕ್ತ ದರಪಟ್ಟಿಗೆ ಪರಿಷ್ಕರಿಸಿ ಅನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

2. ಅರಕೋಲ ಪಟ್ಟಣಕ್ಕೆ ಸಾಕಷ್ಟು ನೀರು ಇದ್ದು, ಜಲ ಸಂಗ್ರಹಾಗಾರದ ಸಾಮರ್ಥ್ಯ ಸಾಕಷ್ಟಿಲ್ಲ. ಆದ್ದರಿಂದ ಮಂಡಳಿ ವತಿಯಿಂದ ಒಂದು ಲಕ್ಷ ಗ್ಯಾಲನ್ ಸಾಮರ್ಥ್ಯವುಳ್ಳ ಜಲ ಸಂಗ್ರಹಗಾರದ ಕೆಲಸ ಮತ್ತು ಅದನ್ನು ಈಗಿರುವ ವಿತರಣಾ ವ್ಯವಸ್ಥೆಗೆ ಸಂಪರ್ಕಿಸುವ ಕೊಳವೆ ಮಾರ್ಗದ ಕೆಲಸವನ್ನು ತೇವಣಿ ಕೊಡುಗೆ ಆಧಾರದ ಮೇಲೆ ಕೈಗೊಂಡಿದ್ದು, ಈ ಕೆಲಸಗಳು ಮುಗಿಯುವ ಹಂತದಲ್ಲಿದೆ.

ವಿಷಯ : ದ.ಕನ್ನಡ ಜಿಲ್ಲೆಯಲ್ಲಿ ರೇಷ್ಮೆ ಕೃಷಿ

1481 (2013)-ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1995-96, 1996-97ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ರೇಷ್ಮೆ ಇಲಾಖೆ ಕೃಷಿ ಕೈಗೊಳ್ಳಲು ವಿತರಿಸಿದ ಮೊಟ್ಟೆ ಬಿತ್ತನೆಗಳು ಬಿಳಿ ಮತ್ತು ಹಳದಿ ಎಷ್ಟು?

ಆ) ಮಾರಾಟವಾದ ಬಿಳಿ ಮತ್ತು ಹಳದಿ ಗೂಡ ಎಷ್ಟು? (ಮೆ.ಟನ್ನುಗಳಲ್ಲಿ)

ಇ) 1995-96 ಮತ್ತು 1996-97ನೇ ಸಾಲಿನಲ್ಲಿ ಸುಳ್ಯಾ ತಾಲ್ಲೂಕಿಗೆ ವಿತರಿಸಿದ ಮೊಟ್ಟೆ (ಬಿತ್ತನೆ) ಎಷ್ಟು? ಬೆಳೆದ ಗೂಡು ಎಷ್ಟು?

ಈ) ದಿನಾಂಕ 7-2-1997ರಂದು ಹಾಸನದ ಮಾರಾಟ ವಿಭಾಗದ ಅಧಿಕಾರಿಗಳು ವೇಣೂರು ವಲಯಾಧಿಕಾರಿಯವರಿಂದ ಪೋರ್ಜರಿ ಪಾಸ್ ಪುಸ್ತಕ ವಶಪಡಿಸಿ ಕೊಂಡ ನಂತರ ಯಾವ ಕ್ರಮ ಕೈಗೊಳ್ಳಲಾಗಿದೆ.